Online Newspaper Clipping Service
**Dated, Sunday, 23rd April – 2017**

DECCAN HERALD

**Pg.No.09**

# MCI directs doctors to prescribe generic drugs only

## Statutory body warns of disciplinary action

**NEW DELHI: The country's apex medical regulator has warned the doctors of action if they fail to adhere to its guideline on prescribing the drugs only in generic names and writing prescriptions legibly.**

The Medical Council of India (MCI) has also asked the medical practitioners to ensure that there is rational prescription and use of drugs, failing which "strict disciplinary action" will be taken if they fail to adhere to it orders.

The MCI reiterated its 2016 directive, few days after Prime Minister Narendra Modi stressed on putting in place a legal framework to ensure that the doctors prescribe low cost generic medicines to the patients.

It has asked the medical community to follow its 2016 notification in which the MCI had amended the clause 1.5 of the Indian Medical Council (Professional Conduct, Etiquette and Ethics) Regulations, 2002 mandating the doctors to prescribe medicines by generic names in place of brand names.

Recently, while inaugurating a multi-speciality hospital in Surat, Modi had said that the doctors write prescriptions in such a way that the poor people do not understand their handwriting and they end up buying medicines from the private stores at high prices.

### New directive



**The apex medical regulator reminded doctors that prescriptions had to be legible, preferably in capital letters, and there had to be a "rational" prescription on the use of drugs.**

"All the registered medical practitioners under the IMC Act are directed to comply with the aforesaid provisions of the regulations without fail," said the MCI circular, issued to the Deans, Principals of Medical Colleges, Directors of all the hospitals, Presidents of all State Medical Councils.

The government is also revising the National List of Essential Medicines of 2015 to include more medicines.

The Jan Aushadhi programme, under which the government provides essential medicines at reasonable rates at specially established shops, is also being reinforced.

**PTI**

ಪ್ರಜಾವಾಣಿ



### ವೈದ್ಯರಿಗೆ ಭಾರತೀಯ ವೈದ್ಯಕೀಯ ಮಂಡಳಿ ಕಟ್ಟುನಿಟ್ಟಿನ ಎಚ್ಚರಿಕೆ

# ಜನರಿಕ್ ಔಷಧ ಸೂಚಿಸಿ

ನವದೆಹಲಿ (ಪಿಟಿಐ): ಜನರಿಕ್ ಔಷಧಗಳನ್ನೇ ತೆಗೆದುಕೊಳ್ಳುವಂತೆ ರೋಗಿಗಳಿಗೆ ಸೂಚಿಸಬೇಕು ಎಂದು ಭಾರತೀಯ ವೈದ್ಯಕೀಯ ಮಂಡಳಿಯು (ಎಂಸಿಐ) ಎಲ್ಲ ವೈದ್ಯರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಅಲ್ಲದೇ, ಚೀಟಿಯಲ್ಲಿ ಔಷಧಗಳ ಹೆಸರುಗಳನ್ನು ಸ್ಪಷ್ಟವಾಗಿ ನಮೂದಿಸುವಂತೆಯೂ ಅದು ತಾಕೀತು ಮಾಡಿದೆ. ಒಂದು ವೇಳೆ, ಆದೇಶ ಉಲ್ಲಂಘಿಸಿದರೆ ಕಠಿಣ ಕ್ರಮಗಳನ್ನು ಎದುರಿಸಬೇಕಾದೀತು ಎಂದು ಎಚ್ಚರಿಸಿದೆ.

ರೋಗಿಗಳಿಗೆ ಔಷಧಗಳನ್ನು ಸೂಚಿಸುವಾಗ ಮತ್ತು ಚಿಕಿತ್ಸೆಯ ಸಂದರ್ಭದಲ್ಲಿ ಅವುಗಳನ್ನು ಬಳಸುವಾಗ ವಿವೇಚನೆ ಬಳಸುವಂತೆಯೂ ಎಂಸಿಐ ಸಲಹೆ ನೀಡಿದೆ.

ವೈದ್ಯರು ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ರೂಪಿಸಿ ಮಂಡಳಿಯು ಕಳೆದ ವರ್ಷ (2016) ಅಧಿಸೂಚನೆ ಹೊರಡಿಸಿತ್ತು.

ಈಗ ಅದೇ ಮಾರ್ಗಸೂಚಿಗಳನ್ನು ವೈದ್ಯಕೀಯ ಕಾಲೇಜುಗಳ ಡೀನ್‌ಗಳು, ಪ್ರಾಂಶುಪಾಲರು, ಆಸ್ಪತ್ರೆಗಳ ನಿರ್ದೇಶಕರು ಮತ್ತು ಎಲ್ಲ ರಾಜ್ಯಗಳ ವೈದ್ಯಕೀಯ ಮಂಡಳಿಗಳ ಗಮನಕ್ಕೆ ತಂದಿರುವ ಎಂಸಿಐ, ಅವುಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಿ ಸುತ್ತೋಲೆ ಹೊರಡಿಸಿದೆ.

ವೈದ್ಯರು ರೋಗಿಗಳಿಗೆ ಅಗ್ಗದ ಜನರಿಕ್ ಔಷಧಗಳನ್ನೇ ತೆಗೆದುಕೊಳ್ಳಲು ಸೂಚಿಸುವಂತೆ ಮಾಡಲು ಕಾನೂನು ರೂಪಿಸಬೇಕಾದ ಅವಶ್ಯಕತೆಯ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಮಾತನಾಡಿದ ಕೆಲವೇ ದಿನಗಳಲ್ಲಿ ಎಂಸಿಐ, ಈ ಸುತ್ತೋಲೆ ಹೊರಡಿಸಿದೆ.

ಗುಜರಾತ್‌ನ ಸೂರತ್‌ನಲ್ಲಿ ಇತ್ತೀಚೆಗೆ ಮಲ್ಟಿ-ಸ್ಪೆಷಾಲಿಟಿ ಆಸ್ಪತ್ರೆಯನ್ನು ಉದ್ಘಾಟಿಸಿದ್ದ ಮೋದಿ, 'ಬಡ ಜನರಿಗೆ ಅರ್ಥವಾಗದ ರೀತಿಯಲ್ಲಿ ವೈದ್ಯರು ಔಷಧಗಳ ಹೆಸರುಗಳನ್ನು ಬರೆಯುತ್ತಾರೆ. ಅಂತಿಮವಾಗಿ ಜನರು ಖಾಸಗಿ ಔಷಧ ಮಳಿಗೆಗಳಿಂದ ಹೆಚ್ಚಿನ ಬೆಲೆಗೆ ಔಷಧ ಖರೀದಿಸುತ್ತಾರೆ' ಎಂದಿದ್ದರು.

**ತಿದ್ದುಪಡಿ:** ಬ್ರ್ಯಾಂಡ್ ಔಷಧಗಳ ಬದಲಾಗಿ ಜನರಿಕ್ ಔಷಧಗಳನ್ನೇ ತೆಗೆದುಕೊಳ್ಳಲು ರೋಗಿಗಳಿಗೆ ಸೂಚಿಸುವುದನ್ನು ಕಡ್ಡಾಯಗೊಳಿಸುವುದಕ್ಕಾಗಿ ಭಾರತೀಯ ವೈದ್ಯಕೀಯ ಮಂಡಳಿ (ವೃತ್ತಿಪರ ನಡತೆ, ಶಿಷ್ಟಾಚಾರ ಮತ್ತು ನೈತಿಕತೆ) ನಿಯಂತ್ರಣ ಕ್ರಮಗಳು-2002ರ 1.5ನೇ ನಿಯಮಕ್ಕೆ ತಿದ್ದುಪಡಿ ತರಲಾಗಿತ್ತು.

**ಪರಿಷ್ಕರಣೆ:** 2015ರಲ್ಲಿ ಪ್ರಕಟಿಸಲಾಗಿರುವ ಅಗತ್ಯ ಔಷಧಗಳ ಪಟ್ಟಿಯನ್ನು ಕೇಂದ್ರ ಸರ್ಕಾರ ಪರಿಷ್ಕರಿಸಲಿದ್ದು ಇನ್ನಷ್ಟು ಔಷಧಗಳನ್ನು ಅದಕ್ಕೆ ಸೇರಿಸಲಿದೆ.



**ಮುಖ್ಯಾಂಶಗಳು**

- ದುಬಾರಿ ಬ್ರ್ಯಾಂಡ್ ಔಷಧ ತೆಗೆದುಕೊಳ್ಳಲು ಸಲಹೆ ನೀಡುವಂತಿಲ್ಲ
- ಚೀಟಿಯಲ್ಲಿ ಔಷಧದ ಹೆಸರು ಸ್ಪಷ್ಟವಾಗಿ ನಮೂದಿಸಬೇಕು
- 2016ರ ಮಾರ್ಗಸೂಚಿಗಳನ್ನು ಪುನರುಚ್ಚರಿಸಿದ ಎಂಸಿಐ

## ಔಷಧಿ ಪೂರೈಕೆಗೆ ಸಿದ್ಧ: ಅನಂತಕುಮಾರ್



ಮಂಗಳೂರು: 'ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧೀನದಲ್ಲಿರುವ ಎಲ್ಲ ಆಸ್ಪತ್ರೆಗಳು, ಆರೋಗ್ಯ ಕೇಂದ್ರಗಳಲ್ಲಿ ಜೆನೆರಿಕ್ ಔಷಧಿ ಬಳಕೆಗೆ ಮುಂದಾದರೆ, ಅಗತ್ಯ ಪ್ರಮಾಣದ ಔಷಧಿ ಪೂರೈಸಲು ಕೇಂದ್ರ ಸರ್ಕಾರ ಸಿದ್ಧವಿದೆ' ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಅನಂತಕುಮಾರ್ ಹೇಳಿದರು.

ಶನಿವಾರ ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಕಚೇರಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, 'ಈಗ ರಾಜ್ಯದ ಆರೋಗ್ಯ ಇಲಾಖೆ ತನ್ನ ಆಸ್ಪತ್ರೆಗಳಿಗೆ ವರ್ಷಕ್ಕೆ ₹ 400 ಕೋಟಿ ಮೊತ್ತದ ಔಷಧಿಗಳನ್ನು ಖಾಸಗಿ ಕಂಪೆನಿಗಳಿಂದ ಖರೀದಿಸಿ, ಪೂರೈಕೆ ಮಾಡುತ್ತಿದೆ. ಅದೇ ಪ್ರಮಾಣದ ಜೆನೆರಿಕ್ ಔಷಧಿಯನ್ನು ಖರೀದಿಸಿ, ಬಳಕೆ ಮಾಡಿದರೆ ₹ 150 ಕೋಟಿ ಮಾತ್ರ ಸಾಕಾಗುತ್ತದೆ. ಇದರಿಂದ ರಾಜ್ಯ ಸರ್ಕಾರಕ್ಕೆ ₹ 250 ಕೋಟಿ ಉಳಿತಾಯವಾಗುತ್ತದೆ' ಎಂದರು.

ಕೆ.ಆರ್.ರಮೇಶ್‌ಕುಮಾರ್ ಅವರು ಆರೋಗ್ಯ ಸಚಿವರಾದ ಬಳಿಕ ಜೆನೆರಿಕ್ ಔಷಧಿ ಬಳಕೆಯತ್ತ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹೆಚ್ಚಿನ ಆಸಕ್ತಿ ತೋರುತ್ತಿದೆ. 200 ಜನೌಷಧಿ ಕೇಂದ್ರಗಳ ಸ್ಥಾಪನೆಗೆ ಅವರು ಪ್ರಸ್ತಾವ ಸಲ್ಲಿಸಿದ್ದಾರೆ. ಖಾಸಗಿ ವ್ಯಕ್ತಿಗಳು, ಸಹಕಾರಿ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು, ಸ್ವಸಹಾಯ ಗುಂಪುಗಳು ಬಯಸಿದರೆ ಜನೌಷಧಿ ಕೇಂದ್ರಗಳನ್ನು ಮಂಜೂರು ಮಾಡಲು ಕೇಂದ್ರ ಸರ್ಕಾರ ಸಿದ್ಧವಾಗಿದೆ ಎಂದು ಹೇಳಿದರು.

ವಿಜಯವಾಣಿ



# ಜೆನರಿಕ್ ಔಷಧ ಶಿಫಾರಸು ವೈದ್ಯರಿಗೆ ಐಎಂಸಿ ಸೂಚನೆ

ನವದೆಹಲಿ: ಭಾರತೀಯ ವೈದ್ಯಕೀಯ ಮಂಡಳಿಯಲ್ಲಿ (ಐಎಂಸಿ) ನೋಂದಾಯಿತರಾದ ಎಲ್ಲಾ ವೈದ್ಯರುಗಳೂ ತನ್ನ ಮಾರ್ಗಸೂಚಿಯನ್ನು ಅನುಸರಿಸಬೇಕು ತಪ್ಪಿದಲ್ಲಿ ಶಿಸ್ತು ಕ್ರಮ ಎದುರಿಸಬೇಕಾಗಬಹುದು ಎಂದು ಐಎಂಸಿ ವೈದ್ಯಕೀಯ ಕಾಲೇಜುಗಳ ಎಲ್ಲಾ ಡೀನ್‌ಗಳಿಗೆ, ಆಸ್ಪತ್ರೆಗಳ ನಿರ್ದೇಶಕರುಗಳಿಗೆ ಹಾಗೂ ರಾಜ್ಯ ವೈದ್ಯಕೀಯ ಮಂಡಳಿಗಳ ಅಧ್ಯಕ್ಷರುಗಳಿಗೆ ಸುತ್ತೋಲೆ ಹೊರಡಿಸಿದೆ. ವೈದ್ಯರುಗಳು ಜೆನರಿಕ್ ಔಷಧಗಳನ್ನಷ್ಟೇ ರೋಗಿಗಳಿಗೆ ಶಿಫಾರಸು ಮಾಡಬೇಕು ಮತ್ತು ಔಷಧಗಳ ಹೆಸರನ್ನು ಸ್ಪಷ್ಟವಾಗಿ ಕಾಣುವಂತೆ ಬರೆಯಬೇಕು ಎಂದು ಸುತ್ತೋಲೆಯಲ್ಲಿ ಸೂಚಿಸಲಾಗಿದೆ. ಕಂಪನಿಗಳ ಔಷಧಗಳಷ್ಟೆ ಗುಣಮಟ್ಟದಿಂದ ಕೂಡಿರುವ ಕಡಿಮೆ ಬೆಲೆಯ ಜೆನರಿಕ್ ಔಷಧಗಳನ್ನೇ ವೈದ್ಯರು ಸೂಚಿಸಬೇಕು, ಈ ನಿಟ್ಟಿನಲ್ಲಿ ಕಾನೂನು ರೂಪಿಸುವುದು ಅತ್ಯಗತ್ಯ ಎಂದು ಪ್ರಧಾನಿ ನರೇಂದ್ರ ಮೋದಿಯವರು ಹೇಳಿರುವ ಬೆನ್ನಲ್ಲೇ ಐಎಂಸಿ ತನ್ನ 2016ರ ನಿಯಮಾವಳಿಯಲ್ಲಿನ ಮಾರ್ಗಸೂಚಿಗಳನ್ನು ಪಾಲಿಸತಕ್ಕದ್ದು ಎಂದು ವೈದ್ಯರುಗಳಿಗೆ ಸೂಚಿಸಿದೆ. ಔಷಧಗಳ ಬ್ರ್ಯಾಂಡ್ ಹೆಸರನ್ನು ನಮೂದಿಸದೆ ಔಷಧದ ಜೆನರಿಕ್ ಹೆಸರನ್ನು ನಮೂದಿಸುವ ಕುರಿತು ಎಂಸಿಐ 2016ರಲ್ಲಿ ಪ್ರಕಟಣೆ ನೀಡಿ, 2002ರ ಐಎಂಸಿ ನಿಯಮಾವಳಿಗೆ (ವೃತ್ತಿ ನೀತಿ ಸಂಹಿತೆ, ಶಿಷ್ಟಾಚಾರ ಹಾಗೂ ನೈತಿಕತೆ) ತಿದ್ದುಪಡಿ ತಂದಿತ್ತು. -ಏಜೆನ್ಸೀಸ್



# ಜೆನೆರಿಕ್ ಔಷಧ ಬರೆಯದ ವೈದ್ಯರ ವಿರುದ್ಧ ಕ್ರಮ: ಎಂಸಿಐ

ನವದೆಹಲಿ: ಜೆನೆರಿಕ್ ಔಷಧ ಲಭ್ಯವಿದ್ದರೂ ದುಬಾರಿ ಬೆಲೆಯ ಬ್ರ್ಯಾಂಡೆಡ್ ಔಷಧ ಬರೆದು ಕೊಡುವ ವೈದ್ಯರಿಗೆ ಭಾರತೀಯ ವೈದ್ಯಕೀಯ ಮಂಡಳಿ (ಎಂಸಿಐ) ಬಿಸಿ ಮುಟ್ಟಿಸಿದೆ. ಜೆನೆರಿಕ್ ಔಷಧಗಳನ್ನು ಜನರು ಓದಲು ಆಗುವ ರೀತಿ ಬರೆದುಕೊಡದ ವೈದ್ಯರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಗುಡುಗಿದೆ. ಕಡಿಮೆ ಬೆಲೆಯ ಜೆನೆರಿಕ್ ಔಷಧಗಳನ್ನೇ ವೈದ್ಯರು ರೋಗಿಗಳಿಗೆ ಬರೆದು ಕೊಡುವಂತೆ ಮಾಡಲು ನಿಯಮ ರೂಪಿಸುವ ಸುಳಿವನ್ನು ಪ್ರಧಾನಿ ಮೋದಿ ಕೆಲ ದಿನಗಳ ಹಿಂದೆ ನೀಡಿದ ಬೆನ್ನಲ್ಲೇ ಎಂಸಿಐನಿಂದ ಈ ಎಚ್ಚರಿಕೆ ಬಂದಿದೆ. ಜೆನೆರಿಕ್ ಔಷಧ ಸೂಚಿಸಬೇಕೆಂದು 2016ರಲ್ಲೇ ಎಂಸಿಐ ಸೂಚಿಸಿತ್ತು.

# ಡಿ-ಕೋಲ್ಡ್, ಸಿಟ್ರಿಜನ್ ಸೇರಿ 60 ಔಷಧ ಕಳಪೆ: ವರದಿ

ನವದೆಹಲಿ: ಸಾಮಾನ್ಯವಾಗಿ ಬಳಸುವ ಕಾಂಬಿಫ್ಲಾಮ್, ಡಿ- ಕೋಲ್ಡ್, ಸಿಟ್ರಿಜನ್ ಸೇರಿದಂತೆ 60 ಔಷಧಗಳು ಕಳಪೆ ಗುಣಮಟ್ಟ ಹೊಂದಿವೆ ಎಂದು ಕೇಂದ್ರೀಯ ಔಷಧ ಗುಣಮಟ್ಟ ಸಂಸ್ಥೆಯ ವರದಿ ತಿಳಿಸಿದೆ. ಕಳೆದ ತಿಂಗಳು ನಡೆಸಿದ ಪರೀಕ್ಷೆಯ ವೇಳೆ ಈ ಔಷಧಗಳು ಗುಣಮಟ್ಟ ಪರೀಕ್ಷೆಯಲ್ಲಿ ವಿಫಲವಾಗಿವೆ. ಈ ಪಟ್ಟಿಯಲ್ಲಿ ಜ್ವರ, ತಂಡಿ, ಭೇದಿ, ಅಲರ್ಜಿ ನಿವಾರಕ ಮಾತ್ರೆ, ನೋವು ನಿವಾರಕ ಮಾತ್ರೆ ಸೇರಿದಂತೆ ದಿನನಿತ್ಯ ಬಳಸುವ ಔಷಧಗಳು ಸೇರಿವೆ. ಸಿಪ್ಲಾ, ಕಾಡಿಲಾ, ಸನೋಫಿ ಮುಂತಾ ಖ್ಯಾತ ಬ್ರ್ಯಾಂಡ್‌ಗಳಿಂದ ತಯಾರಾದ ಔಷಧಗಳೂ ಕಳಪೆ ಗುಣಮಟ್ಟ ಹೊಂದಿವೆ ಎಂದು ವರದಿ ತಿಳಿಸಿದೆ.